ಓ ಎಸ್ ನಂ.72/2022

ಪಿ.ಡಬ್ಲ್ಯೂ-1 ಗುರುಶಾಂತಪ್ಪ ತಂದೆ ಶ್ರೀಮಂತರಾಯ

(ಇಂದು ದಿನಾಂಕಃ **23-06-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎಸ್ ಎಸ್ ವಕೀಲರಿಂದ.</u>

ನಮ್ಮ ತಂದೆಯವರಿಗೆ ಗುರುಶಾಂತಪ್ಪ, ಸುರೇಶ, ಸೈದಪ್ಪ ೩ ಜನ ಗಂಡು ಮಕ್ಕಳು ಮತ್ತು ಬೇಬಿ ಎಂಬ ಒಬ್ಬಳು ಹೆಣ್ಣುಮಗಳು ಮಕ್ಕಳಾಗಿರುತ್ತೇವೆ. ನಮ್ಮ ತಂದೆಯವರು ಇನ್ನು ಜೀವಿತಾ ಇರುತ್ತಾರೆ. ದಾವಾ ಜಮೀನು ನನಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ವಿಭಾಗ ಪತ್ರ ೫-೬ ಜನ ಪಂಚರು ಸೇರಿ ಮಾಡಿರುತ್ತಾರೆ. ನಮ್ಮ ಕಾಕಗಳು ೫ ಜನ ಸೇರಿ ಪಂಚರಸಮಕ್ಷಮ ವಿಭಾಗ ಪತ್ರ ಬರೆಯಲಾಗಿದೆ. ಅದರ ಸಾಕ್ಷಿದಾರರು ಗೊತ್ತು. ಎಸ್ ಎಸ್ ಮೇತ್ರೆ, ಶಿವಶರಣಮ್ಮ ಮಾಡ್ಯಾಳ ಮತ್ತು ಇತರರು ಸದರಿ ವಿಭಾಗ ಪತ್ರಕ್ಕೆ ಸಾಕ್ಷಿದಾರರಾಗಿದ್ದರು. ನಾನು ಹೇಳಿದಂತೆ ಯಾವುದೇ ವಿಭಾಗ ಆಗದೆ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನನ್ನ ೨ ಜನ ಸಹೋದರರು ಜೀವಿತಾ ಇರುತ್ತಾರೆ ಎಂದರೆ ಸರಿ. ಪಾಲಿನಲ್ಲಿ ಸರ್ವೆ ನಂಬರ ೩೭/೧ ರ ೨೦ ಎಕರೆ ೧೮ ಗುಂಟೆ ನನ್ನ ಪಾಲಿಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨. ೨೦೧೪-೧೫ ರಲ್ಲಿ ಖೊಟ್ಟಿಯಾಗಿ ಪ್ರತಿವಾದಿ ಜಮೀನು ಮಾಡಿಕೊಂಡಿರುತ್ತಾರೆ. ನಮ್ಮ ತಂದೆಯವರ ಪಾಲು ೧೯೯೨ ರಲ್ಲಿ ಆಗಿರುತ್ತದೆ. ೨೦೦೦ನೇ ಇಸವಿಯಲ್ಲಿ ನನ್ನ ಮತ್ತು ನನ್ನ ತಂದೆ ಹಾಗೂ ಸಹೋದರರ ಮದ್ಯ ಪಾಲು ಆಗಿರುತ್ತದೆ. ನನ್ನ ಸಹೋದರರ ನಡುವೆ ಆದ ಪಾಲಿನ ಕುರಿತು ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಮತ್ತು ನನ್ನ ಸಹೋದರರು ಮಾಡಿಕೊಂಡ ಪಾಲಿನ ಕುರಿತು ನನ್ನ ಹತ್ತಿರ ದಾಖಲೆ ಇರುತ್ತದೆ. ಸದರಿ

ಪಾಲಿನಂತೆ ನನಗೆ ಸೊನ್ನ ಗ್ರಾಮದ ಸರ್ವೆ ನಂಬರ ೩೭/೧ ರಲ್ಲಿ ಪಾಲು ಬಂದಿರುತ್ತದೆ. ನನ್ನ ಸಹೋದರ ಸುರೇಶರವರಿಗೆ ದುದನಿಯಲ್ಲಿರುವ ಹೊಲ ಮನೆ ಪಾಲಿಗೆ ಬಂದಿರುತ್ತವೆ. ಸೈದಪ್ಪರವರಿಗೂ ಕೂಡಾ ದುದನಿಯಲ್ಲಿರುವ ಆಸ್ತಿಗಳು ಪಾಲಿಗೆ ಬಂದಿರುತ್ತವೆ. ಸದರಿ ಪಾಲನ್ನು ೪-೫ ಜನ ಪಂಚರು ಬರೆದುಕೊಟ್ಟಿರುತ್ತಾರೆ. ನಮ್ಮ ತಂದೆಯವರು ಮುಂದೆ ಕುಳಿತು ಸದರಿ ಪಾಲನ್ನು ಮಾಡಿಸಿರುತ್ತಾರೆ. ಪಂಚರಾಗಿ ಎಸ್ ಎಸ್ ಮೇತ್ರೆ ಮತ್ತು ನಮ್ಮ ತಂದೆಯವರು ಇದ್ದರು. ನಾನು ಹೇಳಿದಂತೆ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ನನಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಪಾಲು ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ.

೩. ಸರ್ವೆ ನಂಬರ ೩೭/೨ ರ ೨೦ ಎಕರೆ ೧೮ ಗುಂಟೆ ಜಮೀನು ನನ್ನ ಸ್ವಾಧೀನದಲ್ಲಿ ಇರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಕಿರುವುದಿಲ್ಲ. ನನ್ನ ೩ ಎಕರೆ ಜಮೀನು ಹೋಗಿದ್ದರಿಂದ ನಾನು ಅದನ್ನು ಈ ದಾವೆಯಲ್ಲಿ ಬೇಡಿರುತ್ತೇನೆ. ದಾವಾ ಜಮೀನು ೩ ಎಕರೆ ೧೦ ಗುಂಟೆ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಡಾ.ಶಾಂತಪ್ಪ ಸಂಗಣಪ್ಪ ಪರಮಶೆಟ್ಟಿ ಇರುತ್ತಾರೆ, ಪಶ್ಚಿಮಕ್ಕೆ ಅಭೀಷೇಕ ತಂದೆ ಲಕ್ಷ್ಮೀಪುತ್ರ ಪರಮಶೆಟ್ಟಿ ಇರುತ್ತಾರೆ, ಉತ್ತರಕ್ಕೆ ಪ್ರತಿವಾದಿ ಇರುತ್ತಾರೆ ಮತ್ತು ದಕ್ಷಿಣಕ್ಕೆ ಗುರಣ್ಣ ಕಿಣಗಿರವರು ಇರುತ್ತಾರೆ. ದಾವಾ ಜಮೀನಿನ ಪೂರ್ವಕ್ಕೆ ನಂದಕುಮಾರರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಗಾಡಿ ಹಾದಿ ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ಸರ್ವೆ ನಂಬರ ೩೭/೨ ರ ನನ್ನ ಹೆಸರಿನಲ್ಲಿರುವ ಉಳಿದ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಮತ್ತು ನಾನು ಸ್ವಾಧೀನದಲ್ಲಿ ಕೂಡಾ ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ನಾನೇ ಉಳುಮೆ ಮಾಡುತ್ತೇನೆ ಮತ್ತು

ಸ್ವಾಧೀನದಲ್ಲಿರುತ್ತೇನೆ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಪಾಲಿನಂತೆ ದಾವಾ ಜಮೀನು ನನಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೪. ೨೦೧೪-೧೫ ರಲ್ಲಿ ನಾನು ಪಹಣಿಯನ್ನು ತೆಗೆಯಲು ಹೋದಾಗ ನನಗೆ ಖೊಟ್ಟಿಯಾಗಿ ಮಾಡಿಕೊಂಡ ವಿಚಾರ ಗೊತ್ತಾಗಿರುತ್ತದೆ. ಪ್ರತಿವಾದಿಯನ್ನು ಖೊಟ್ಟಿಯಾಗಿ ಏಕೆ ಮಾಡಿಕೊಂಡಿರುತ್ತೀ ಎಂದು ಕೇಳಿದಾಗ ಉತ್ತರ ನೀಡದ ಕಾರಣ ನಾನು ಎಸಿ ರವರ ಬಳಿ ಹೋಗಿರುತ್ತೇನೆ. ನಾನು ಎಸಿರವರ ಹತ್ತಿರ ಸರ್ವೆ ನಂಬರ ೩೭/೧ ರ ૩ ಎಕರೆ ೨೦ ಗುಂಟೆ ಜಮೀನಿನ ಕುರಿತು ಅಪೀಲು ಮಾಡಿದ್ದೆ ಎಂದರೆ ಸರಿ. ೨೦೧೬ ರಲ್ಲಿ ಪ್ರತಿವಾದಿ ತಾನೆ ಸದರಿ ಜಮೀನಿನ ಮಾಲೀಕ ಮತ್ತು ಸ್ವಾಧೀನದಾರ ಆಗಿರುತ್ತೇನೆ ಮತ್ತು ನೀವು ಮಾಲೀಕರಲ್ಲ ಎಂದು ತಕರಾರು ಹಾಕಿದ್ದರು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ೨೦೧೬ ರಲ್ಲಿ ಪ್ರತಿವಾದಿ ನೀಡಿದ ಉತ್ತರದ ಕುರಿತು ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿ ತಕರಾರು ಹಾಕಿದ ವಿಚಾರವನ್ನು ನಮ್ಮ ವಕೀಲರು ನನಗೆ ತಿಳಿಸಿದ್ದರು ಎಂದರೆ ಸರಿ. ನಾನು ತಕರಾರು ಹಾಕಿದ ವಿಚಾರ ಗೊತ್ತಿದ್ದರೂ ಸಹ ಗೊತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೫. ೨೦೧೪ ರಿಂದ ೨೦೨೨ ರವರೆಗೆ ನಾನು ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ಎಸಿ ಮತ್ತು ಡಿಸಿರವರ ಬಳಿ ಕೇಸು ಮಾಡಿದ್ದೇ ಎನ್ನುತ್ತಾರೆ. ಕಂದಾಯಾಧಿಕಾರಿಗಳ ಮುಂದೆ ನಾನು ಸರ್ವೆ ನಂಬರ ೩೭/೧ ರ ಕುರಿತು ૩ ಎಕರೆ ೨೦ ಗುಂಟೆ ಜಮೀನಿನ ವಿಚಾರವಾಗಿ ಕೇಸು ಹಾಕಿದ್ದೆ ಮತ್ತು ಈಗ ದಾವಾ ಆಸ್ತಿ ಸರ್ವೆ ನಂಬರ ೩೭/೨ ರ ૩ ಎಕರೆ ೧೦ ಗುಂಟೆ ಜಮೀನಿನ ಕುರಿತು ಕೇಸು ಹಾಕಿರುತ್ತೇನೆ, ಅವು ೨ ಬೇರೆ-ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಈಗ ಪ್ರತಿವಾದಿ ಆ ರೀತಿ

ಮಾಡಿಕೊಂಡಿರುತ್ತಾರೆ ೨ ಜಮೀನು ಒಂದೇ ಎನ್ನುತ್ತಾರೆ. ೨ ಆಸ್ತಿಗಳು ಒಂದೇ ಇರುತ್ತವೆ ಎಂದು ದಾಖಲೆಗಳನ್ನು ನೀಡಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

೬. ಎಸಿ ಮತ್ತು ಡಿಸಿ ರವರು ನನ್ನ ವಿರುದ್ದ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ಸರ್ವೆ ನಂಬರ ೩೭/೧ ರ ೩ ಎಕರೆ ೨೦ ಗುಂಟೆ ಜಮೀನಿನ ಕುರಿತು ನಾನು ಯಾವುದೇ ದಾವೇ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ದಾವೆ ಹಾಕದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರಿನಲ್ಲಿ ೨೦ ಎಕರೆ ೧೮ ಗುಂಟೆ ಮತ್ತು ಪ್ರತಿವಾದಿ ಹೆಸರಿನಲ್ಲಿ ೧೫ ಎಕರೆ ಜಮೀನು ಇದ್ದವು ಎಂದರೆ ಸರಿ. ಪ್ರತಿವಾದಿ ಯಶವಂತಪ್ಪ ೧೮ ಎಕರೆ ೧೦ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಉಳಿದ ಜಮೀನಿನಲ್ಲಿ ನಮ್ಮ ತಂದೆ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿಯು ೨೦ ಎಕರೆ ೧೮ ಗುಂಟೆ ಜಮೀನು ಸ್ವಾಧೀನದಲ್ಲಿ ಇದ್ದರು ಎನ್ನುತ್ತಾರೆ. ನಮ್ಮ ತಂದೆ ೨೦ ಎಕರೆ ೧೮ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೭. ಪಾಲಿನಲ್ಲಿ ಪ್ರತಿವಾದಿಗೆ ೧೮ ಎಕರೆ ೧೦ ಗುಂಟೆ ಜಮೀನು ನೀಡಿದ್ದು, ಪಹಣಿಯಲ್ಲಿ ೧೫ ಎಕರೆ ಆಗಿದ್ದರಿಂದ ನಾನು ಮತ್ತು ನನ್ನ ತಂದೆ ಪ್ರತಿವಾದಿಗೆ ೩ ಎಕರೆ ೧೦ ಗುಂಟೆ ಜಮೀನು ನೀಡಿದ್ದೇವು ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಗೆ ತಕರಾರು ಬಂದ ಮೇಲೆ ನಾನು ಈ ಕೇಸು ಹಾಕಿರುತ್ತೇನೆ ಎಂದರೆ ಸಾಕ್ಷಿಯು ಪ್ರತಿವಾದಿ ಜಮೀನು ತನ್ನ ಹೆಸರಿನಲ್ಲಿ ಮಾಡಿಕೊಂಡ ನಂತರ ಕೇಸು ಹಾಕಿರುತ್ತೇನೆ ಎನ್ನುತ್ತಾರೆ. ನಮ್ಮ ಮತ್ತು ಪ್ರತಿವಾದಿ ಜಮೀನಿನ ನಡುವೆ ಬದು ಇರುತ್ತದೆ ಎಂದರೆ ಸರಿ. ಸರ್ವೆ ನಂಬರ ೩೭ ರಲ್ಲಿ

ನಮ್ಮ ಜಮೀನು ದಕ್ಷಿಣಕ್ಕೆ ಮತ್ತು ಪ್ರತಿವಾದಿಯ ಜಮೀನು ಉತ್ತರಕ್ಕೆ ಇವೆ ಎಂದರೆ ಸರಿ. ನಾನು ಪ್ರತಿವಾದಿಯ ವಿರುದ್ದ ಕಂದಾಯಾಧಿಕಾರಿಗಳ ಮುಂದೆ ಮತ್ತು ನ್ಯಾಯಾಲಯದಲ್ಲಿ ಸುಳ್ಳು ಕೇಸುಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

೮. ಪ್ರತಿವಾದಿ ಪಾಲಿನಂತೆ ೧೮ ಎಕರೆ ೧೦ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸತ್ಯ ಸಂಗತಿಗಳನ್ನು ಮುಚ್ಚಿಟ್ಟು ನಾನು ನ್ಯಾಯಾಲಯಕ್ಕೆ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕಂದಾಯಾಧಿಕಾರಿಗಳ ಮುಂದೆ ಹಾಕಿದ ಕೇಸಿಗೂ ಮತ್ತು ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ದಾವಾ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ದಾವಾ ಆಸ್ತಿಗೂ ಸಂಬಂಧ ಇರದೆ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.